**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ.**

**ಸಿ.ಸಿ ನಂ. 50/2022**

**ಚಾಸಾ- 33**

**ಪ್ರಾಸಾ-04**

**ದಿನಾಂಕಃ 06-04-2026 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | |
|---|---|
| ಹೆಸರು | ಃ ರಾಮಕೃಷ್ಣ ತಂಃ ಬಸವರಾಜ ಮಲಸಮುದ್ರ |
| ವಯಸ್ಸು | ಃ 37 ವರ್ಷ |
| ಉದ್ಯೋಗ | ಃ ಪೊಲೀಸ್ ಮುಖ್ಯ ಪೇದೆ, |
| ವಾಸ | ಃ ದಾಂಡೇಲಿ |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.**

1. ನಾನು 2017 ರಿಂದ ಜನೇವರಿ- 2026 ರ ವರೆಗೆ ಜೋಯಿಡಾ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 08-06-2021 ರಂದು ಬೆಳಿಗ್ಗೆ 05-50 ಗಂಟೆ ಸಮಯದಲ್ಲಿ ಚಾಸಾ-1 ರವರ ಆದೇಶದಂತೆ ನಾನು ಮತ್ತು ಚಾಸಾ-32, 34 ಮತ್ತು ಇನ್ನೀತರರು ಈ ಪ್ರಕರಣದ ಆರೋಪಿಯನ್ನು ಹುಡುಕಲು ಹೊರಟೆವು. ಆಗ ಆರೋಪಿಯ ಪತ್ತೆಯ ಸಮಯದಲ್ಲಿ ಕೆಲೂಲಿ ಗ್ರಾಮದ ಕಚ್ಚಾ ರಸ್ತೆಯಲ್ಲಿರುವಾಗ ನಮ್ಮ ಎದುರಿಗನಿಂದ ಒಬ್ಬ ವ್ಯಕ್ತಿ ಒಂದು ದ್ವಿ ಚಕ್ರ ವಾಹನ ನಂಃ ಕೆಎ-30/ಎಲ್-7336 ನೇದರಲ್ಲಿ ಬರುತ್ತಿದ್ದನು. ಆಗ ಆತನು ನಾವು ಸಮವಸ್ತ್ರದಲ್ಲಿರುವುದನ್ನು ನೋಡಿ, ಸದರಿ ಬೈಕ್ ನ್ನು ಅಲ್ಲಿಯೇ ಬಟ್ಟು ಓಡಿ ಹೋದನು. ನಾನು ಅದೇ ಪ್ರದೇದ ಬೀಟ್ ಪೇದೆಯಾದ ಕಾರಣ, ಓಡಿ ಹೋದ ವ್ಯಕ್ತಿ ಸಂತೋಷ ತಂಃ ಜಾನು ಗೌಡ ಅಂದರೆ ಈ ಪ್ರಕರಣದ ಆರೋಪಿ ಎಂದು ಗೊತ್ತಾಯಿತು.

3. ನಂತರ ನಾವು ಸದರಿ ಬೈಕ್ ಹತ್ತಿರ ಬಂದು, ಬೈಕನ್ನು ಪರಿಶೀಲನೆ ಮಾಡಿದಾಗ, ಸದರಿ ಬೈಕ್ ನ ಎಡಬದಿಯಲ್ಲಿ ಒಂಟಿ ನಳಿಕೆಯ ಒಂದು ಬಂದೂಕು ಇತ್ತು. ಆ ಸಮಯದಲ್ಲಿ ಪಂಚರ ಇರದ ಕಾರಣ, ನಾನೇ ನನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ಕುಂಡಲ

ಗ್ರಾಮಕ್ಕೆ ಹೋಗಿ ಇಬ್ಬರು ಪಂಚರನ್ನು ಕರೆತಂದಿರುತ್ತೇನೆ. ಸದರಿ ಪಂಚರ ಸಮಕ್ಷಮ ಬೈಕ್ ನ್ನು ಮತ್ತೊಮ್ಮೆಪರಿಶೀಲೆ ಮಾಡಿದಾಗ ಒಂದು ಒಂಟಿ ನಳಿಕೆಯ ಬಂದೂಕನ್ನು ಸದರಿ ಬೈಕ್ ನ ಎಡಬದಿಗೆ ಹಗ್ಗದಿಂದ ಕಟ್ಟಲಾಗಿತ್ತು ಮತ್ತು ಪಂಚರ ಸಮಕ್ಷಮ ಬೆಳಿಗ್ಗೆ 07-55 ರಿಂದ 09-00 ಗಂಟೆಯ ವರೆಗೆ ಪಂಚನಾಮೆಯನ್ನು ಜರುಗಿಸಿ, ಬೈಕ್ ಮತ್ತು ಬಂದೂಕನ್ನು ಜಪ್ತುಪಡಿಸಿಕೊಂಡಿರುತ್ತೇವೆ.

4. ನಂತರ ನನ್ನ ಮೇಲಾಧಿಕಾರಿಗಳು ಮುಂದಿನ ಕ್ರಮ ಕೈಗೊಂಡಿರುತ್ತಾರೆ. ತನಿಖಾ ಸಮಯದಲ್ಲಿ ನಾನು ತನಿಖಾಧಿಕಾರಿಗಳಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಪೋಟೋವನ್ನು ತೆಗೆಲಾಗಿರುತ್ತದೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ **ಮು.ಮಾ-1 ಒಂಟಿ ನಳಿಕೆಯ ಬಂದೂಕನ್ನು ಹಾಗೂ ನಿಪಿ-3 ರಲ್ಲಿರುವ ಬೈಕ್ ನ್ನು** ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಸ್.ಎಸ್.ಕೆ ವಕೀಲರಿಂದ**

5. ಜೋಯಿಡಾ ಪೊಲೀಸ್ ಠಾಣೆಗೆ ಬಂದು ದಾಂಡೇಲಿ ನ್ಯಾಯಾಲಯ ಸುಮಾರು 25 ಕಿ.ಮೀ ಅಂತರದಲ್ಲಿರುತ್ತದೆ. ಜೋಯಿಡಾ ಪೊಲೀಸ್ ಠಾಣೆಯಿಂದ ಕುಂಡಲ ಗ್ರಾಮ ಅಂದಾಜು 26 ಕಿ.ಮೀ ಅಂತರದಲ್ಲಿರುತ್ತದೆ.

6. ನಾವು ಇಲಾಖಾ ವಾಹನ ನಂಃ ಕೆಎ-30/ಜಿ-390 ನೇದರಲ್ಲಿ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಆರೋಪಿಯನ್ನು ಮೊದಲು ನಾನೇ ನೋಡಿರುತ್ತೇನೆ. ಆ ದಿನ ಆರೋಪಿಯು ಪೂರ್ವ ದಿಕ್ಕಿಗೆ ಓಡಿ ಹೋಗಿರುತ್ತಾನೆ.

7. ಪಂಚನಾಮೆಯ ಸಮಯದಲ್ಲಿ ನಾನು, ಚಾಸಾ-25, ಚಾಸಾ-32, ಚಾಸಾ-34, ಚಾಸಾ-35 ಹಾಗೂ ಪಂಚರಾದ ಚಾಸಾ-26 ಮತ್ತು 27 ರವರು ಹಾಜರಿದ್ದೇವು. ಪಂಚನಾಮೆಯ ಸಮಯದಲ್ಲಿ ಪೋಟೋಗಳನ್ನು ತೆಗೆದವರು ಯಾರು ಎಂದು ನನಗೆ ನೆನಪಿಲ್ಲ. ನಕಾಶೆಯನ್ನು ತನಿಖಾಧಿಕಾರಿಯವರು ತೆಗೆದಿರುತ್ತಾರೆ.

8. ಕುಂಡಲ ಗ್ರಾಮ ಕರ್ನಾಟಕದ ಅಂತಿಮ ಗ್ರಾಮ, ಗೋವಾ ರಾಜ್ಯಕ್ಕೆ ತಾಗಿಕೊಂಡಿರುತ್ತದೆ ಎಂದರೆ ಸರಿ. ಕುಂಡಲ ಕ್ರಾಸ್ ನಿಂದ ಕುಂಡಲ ಗ್ರಾಮಕ್ಕೆ ಹೋಗಲು ಟಾರ್ ರಸ್ತೆ ಇಲ್ಲ ಎಂದರೆ ಸರಿಯಲ್ಲ.

9. ಜೋಯಿಡಾದಿಂದ ಕದ್ರಾಕ್ಕೆ ಹೋಗುವ ರಸ್ತೆ ಹುಲಿ ಸಂರಕ್ಷಣಾ ಅರಣ್ಯ ಪ್ರದೇಶವಾಗಿದ್ದು, ಅದು ನಿರ್ಬಂದಿತ ಪ್ರದೇಶವಾಗಿದ್ದು, ಅಲ್ಲಿ ಯಾವುದೇ ವಾಹನಗಳಿಗೆ ಪ್ರವೇಶ ಇಲ್ಲ ಎಂದರೆ ಸರಿಯಲ್ಲ. ನಾನು ಪಂಚನರನ್ನು ಕರೆದುಕೊಂಡು ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಆರೋಪಿಯು ಯಾವ ಸಮಯದಲ್ಲಿಯೂ ಬಂದೂಕನ್ನು ಹೊಂದಿಲ್ಲ ಮತ್ತು ಬಂದೂಕಿನೊಂದಿಗೆ ಯಾವುದೇ ವಾಹನವನ್ನು ಚಲಾಯಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ದೂರುದಾರರು ನಮ್ಮ ಮೇಲಾಧಿಕಾರಿಗಳಾದ ಕಾರಣ, ಅವರ ಕೋರಿಕೆಯಂತೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಸಹಿ ಇದೆ/-**

**(ತೇಜಸ್ವಿನಿ ಸೊಗಲದ)**

**ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು,**

**ದಾಂಡೇಲಿ.**